ಸಾಹೇಬ್. ಆ ಹುಡುಗ ಯಾರೆಂದು ನಿಜಕ್ಕೂ ನನಗೆ ತಿಳಿಯಲಿಲ್ಲ. ಮಧ್ಯಾಹ್ನ ಒಬ್ಬ ಮುದುಕ ಇದೇ ಹುಡುಗನ ಬಗ್ಗೆ ಕೇಳಿದರು". ಮಧ್ಯಾಹ್ನ ಮಾತನಾಡಿಸಿದ ಮುದುಕ ರಾವ್‌ಜೀಭಾಯಿಯಂತಿರಬೇಕೆಂದು ಊಹಿಸಲು ಸೋರಾಬ – ಮ್ಯಾಕೆಲ್‌ರಿಗೆ ಕಷ್ಟವಾಗಲಿಲ್ಲ. ಚೌಕಿದಾರ ಹೆದರಿ ನಡುಗುತ್ತಿದ್ದುದನ್ನು ಗಮನಿಸಿದ ಸೋರಾಬ ಅವನನ್ನು ಸಂತೈಸುವ ದನಿಯಲ್ಲಿ ಅವನ ಹೆಸರು ಕೇಳಿದ. ಅದು ತಿಳಿದ ಮೇಲೆ, ''ನೋಡು ತೇಜಪಾಲ್, ನೀನು ಯಾವ ಗಲತಿಯನ್ನೂ ಮಾಡಿಲ್ಲ. ಆ ಹುಡುಗ ಯಾರೆಂದು ನಮಗೂ ಗೊತ್ತಿಲ್ಲ. ಆ ದಿವಸ ನಡೆದದ್ದೇನೆಂದು ನೀನು ಸರಿಯಾಗಿ ತಿಳಿಸಿದರೆ ನಾವು ಗೊತ್ತು ಹಿಡಿಯಬಹುದು. ಹೆದರ ಬೇಡ, ಹೇಳು.'' ಎಂದು ಧೈರ್ಯ ತುಂಬುವ ಧಾಟಿಯಲ್ಲಿ ಮನವೊಲಿಸಿದ ಮೇಲೆಯೆ ಹೇಳುವ ಧೈರ್ಯ ಮಾಡಿದ ತೇಜ್‌ಪಾಲನಿಂದ ತಿಳಿದಿದ್ದಿಷ್ಟು: ಆ ಹುಡುಗ ಸತತವಾಗಿ ನಾಲ್ಕು ದಿನ ಇಲ್ಲಿ ಬಂದಿದ್ದ. ಗಿಡ್ಡ ಚಡ್ಡಿ ಅರ್ಧ ತೋಳಿನ ಅಂಗಿ ತೊಟ್ಟಿದ್ದ, ತಲೆಗೆ ಜರಿಯ ಕಸೂತಿಯಿದ್ದ ದುಂಡಗಿನ ಟೋಪಿಯಿತ್ತು. ಕಾಲಿಗೆ ಚಪ್ಪಲಿ, ಮೊದಲೆರಡು ದಿನ. ಗೇಟಿನ ಇದಿರಿಗೆ ರಸ್ತೆಯ ಮೇಲೆ ನಿಂತು ಕಂಪೌಂಡಿನೊಳಗೆ ಹಣಿಕ್ಕಿ ನೋಡಿದವನು ತೇಜಪಾಲನ ದೃಷ್ಟಿಗೆ ಬೀಳುತ್ತಲೇ ಹೊರಟುಹೋದ. ಮೊದಲನೆಯ ದಿವಸ ಗೇಟಿನಲ್ಲಿ ಬಂದು 'ನನ್ನ ಅಜ್ಜಾ ಇರ್ತಾನೆ ಇಲ್ಲಿ' ಎಂದು ಪದಾ ಹಾಡುವ ಧಾಟಿಯಲ್ಲಿ ಹೇಳುತಾ ನಿಂತ. ತೇಜಪಾಲ ಬೇಸರಗೊಂಡು ಗದರಿಸಿದಾಗ ಹೊರಟುಹೋದ. ನಾಲ್ಕನೇ ದಿವಸವೂ ಮತ್ತೆ ಬಂದಾಗ, 'ಬಂದೀಯೇನಪಾ ಅಜ್ಜನನ್ನು ಹುಡುಕುವ ಮೊಮ್ಮಗಾ? ಬಾ' ಎಂದು ತೇಜಪಾಲನೇ ಹತ್ತಿರ ಕರೆದು, 'ಯಾರೋ ನಿನ್ನಜ್ಜ? ಹೆಸರು ಗೊತ್ತುಂಟೋ?' ಎಂದು ಕೇಳಿದಾಗ ಕಲಿಸಿ ಕೊಟ್ಟದ್ದನ್ನು ಉರುಹಾಕಿ ಬಂದವನ ಹಾಗೆ – 'ನಾವು ಬಹಳ ದೂರದ ಊರಿನಿಂದ ಬಂದವರು. ಬಂದು ಹತ್ತು ದಿನಾ ಆಯ್ತು. ಅಪ್ಪನಿಗೆ ಬೇಕಾದ ಮುದುಕನೊಬ್ಬ ಇಲ್ಲಿ ಇರಲು ಬಂದಿದ್ದಾನಂತೆ, ಅಪ್ಪನೇ ಬರುವವನಿದ್ದ ಬಿದ್ದು ಕಾಲಿಗೆ ನೋವು ಮಾಡಿಕೊಂಡಿದ್ದರಿಂದ ಬರಲಿಲ್ಲ. ಇವತ್ತು ಊರು ಬಿಡ್ತಾ ಇದ್ದೇವೆ' ಎಂದ. ಇವನಿಗೆ ತಲೆಬುಡ ಗೊತ್ತಾಗಲಿಲ್ಲ. ಅಂತವರು ಇಲ್ಲಿ ಯಾರೂ ಇಲ್ಲ ಎಂದು ಓಡಿಸಿಬಿಟ್ಟ. ಮಧ್ಯಾಹ್ನ ಅವನನ್ನು ಮಾತನಾಡಿಸಿದ ಮುದುಕ – ಆ ಹುಡುಗ ಬಂದದ್ದು ತನ್ನನ್ನು ಹುಡಕಿಕೊಂಡು ಎಂದು ಹೇಳಿದ ಬಳಿಕವೇ ತೇಜಪಾಲನಿಗೆ ತಾನು ಮಾಡಿದ ತಪ್ಪಿನ ಅರಿವು ಬಂದದ್ದು; ಇಷ್ಟು ಹೇಳುವಷ್ಟರಲ್ಲಿ ಅವನು ಎಷ್ಟು ಗೊಂದಲಿಸಿದ್ದನೆಂದರೆ ಹೆಚ್ಚಿನ ಪ್ರಶ್ನೆ ಕೇಳಿದರೆ ಅತ್ತೇ ಬಿಡುವನೇನೋ ಎಂಬ ಭಯವಾಯಿತು. ಸೋರಾಬ–ಮ್ಯಾಕೆಲ್‌ರಿನ ಜೊತೆಗೆ, ಚೌಕಿದಾರ ಪೂರ್ಣ ಸತ್ಯವನ್ನು ಹೇಳುತ್ತಿಲ್ಲ ಎಂಬ ಶಂಕೆಯೂ ಮೂಡಿತು. ಹೆಚ್ಚಿನ ಪ್ರಶ್ನೆ ಕೇಳುವ ಧೈರ್ಯ ತಮಗೂ ಇರಲಿಲ್ಲ, ಮೇಲಾಗಿ! ಹುಡುಗ ತನ್ನ ಅಪ್ಪ ಡೊಂಬನಂದೇನಾದರೂ ಅಂದಿದ್ದನೆ? ಅವನು ಬಿದ್ದದ್ದು ಮಿಣಿಯ ಮೇಲಿಂದಾಗಿತ್ತೇ? ಕೇಳಲಿಲ್ಲ. ಆದರೂ ಎಂಥ ಅದ್ಭುತ ಆಕಸ್ಮಿಕ ಎಂದುಕೊಂಡು ದಿಗಿಲುಗೊಂಡ ಮನಸ್ಸು ಇದು ಆಕಸ್ಮಿಕವೆಂದು ತಿಳಿಯುವುದರಲ್ಲೇ ಸಮಾಧಾನ ಕಾಣುವ ಪ್ರಯತ್ನ ಮಾಡಿತು. ಸಾಧ್ಯವಾಗಲಿಲ್ಲ. ಚೌಕಿದಾರರನ್ನು ಕೆಳಗೆ ಕಳುಹಿಸಿ ಸೋರಾಬ–ಮ್ಯಾಕೆಲ್ ಇಬ್ಬರೂ ನೇರವಾಗಿ ಜೀತೇಂದ್ರನ ಮನೆಗೆ ನಡೆದರು. ಚೌಕಿದಾರನನ್ನು ಮಾತನಾಡಿಸಿದ ಮೇಲೆ ರಾವ್‌ಜೀಭಾಯಿ ಸೋರಾಬನ ಮನೆಗಾಗಲೀ ತನ್ನ ಮನೆಗಾಗಲೀ ಹೋಗಲೇ ಇಲ್ಲವೆಂದು ತಿಳಿಯುವ ಹೊತ್ತಿಗೆ ಇನ್ನಷ್ಟು ತಡವಾಗಿತ್ತು; ಜಾಧವನ ಪೊಲೀಸ್ ಖಾತೆಯವರ ಪ್ರಯತ್ನ ಕೂಡ ಯಾವ ಕೆಲಸಕ್ಕೂ ಬಾರದೇ ಹೋಯಿತು. ಮರುದಿವಸ, ಸಾಂತಾಕ್ರೂಝಿನ ಹಳೆಯ ಮನೆಗೆ ಹೋಗಿ ವಿಚಾರಿಸಿದಾಗ ಅಂಥ ಹುಡುಗ ಇಲ್ಲಿಯೂ